# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 136 |
| ಸದಸ್ಯರ ಹೆಸರು | ಡಾ॥ ಉಮಾಶ್ರೀ |
| ಉತ್ತರಿಸುವ ದಿನಾಂಕ | 05-03-2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಒಟ್ಟು ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು;</td><td>ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ರಾಜ್ಯದ ಒಟ್ಟು 34565 ದೇವಸ್ಥಾನಗಳು ಒಳಪಟ್ಟಿರುತ್ತವೆ. ವಿವರಗಳು ಈ ಕೆಳಕಂಡಂತಿವೆ:-<br><br><table><tr><th>ಕ್ರ.ಸಂ.</th><th>ಪ್ರವರ್ಗ</th><th>ಸಂಖ್ಯೆ.</th></tr><tr><td>1</td><td>ಎ</td><td>205</td></tr><tr><td>2</td><td>ಬಿ</td><td>193</td></tr><tr><td>3</td><td>ಸಿ</td><td>34166</td></tr><tr><td colspan="2">ಒಟ್ಟು</td><td>34565</td></tr></table></td></tr>
<tr><td>ಆ)</td><td>ಮುಜರಾಯಿ ಇಲಾಖೆಯು ಎಷ್ಟು ಮುಜರಾಯಿ ಆಸ್ತಿಯನ್ನು ಬಾಡಿಗೆಗೆ ಮತ್ತು ಗುತ್ತಿಗೆ ನೀಡಲಾಗಿದೆ; ಅವು ಯಾವುವು; ಇದರಿಂದ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತಿದೆ;</td><td>ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಒಟ್ಟು1,538 ಅಂಗಡಿ, 207 ಕಟ್ಟಡ, 12 ಅತಿಥಿಗೃಹ, 5 ವಿದ್ಯಾಸಂಸ್ಥೆ, 2 ಪಾರ್ಕಿಂಗ್ ಜಾಗ ಮತ್ತು 98 ಎಕರೆ 5 ಗುಂಟೆ ಜಮೀನನ್ನು ಹಾಗೂ 11 ಖಾಲಿ ಜಾಗವನ್ನು ಗುತ್ತಿಗೆಗೆ ನೀಡಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ)<br><br>ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997, ನಿಯಮಗಳು 2002ರಡಿಯಲ್ಲಿ ಧಾರ್ಮಿಕ ದತ್ತಿ ಇಲಾಖೆ ಸೇರಿದ ಸ್ಥಿರ ಸ್ವತ್ತುಗಳನ್ನು (ಖಾಲಿಜಾಗ/ನಿವೇಶನ/ ಅಂಗಡಿ/ಮಳಿಗೆ/ಕಟ್ಟಡ ಇತ್ಯಾದಿ) ಅಲ್ಲಿನ ಸ್ಥಳೀಯ ಮಾರುಕಟ್ಟೆ ದರದಂತೆ ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡಲಾಗಿರುತ್ತದೆ. ಸ್ವತ್ತಿನ ಸ್ಥಳೀಯ ಮಾರುಕಟ್ಟೆ ದರಗಳು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗಿರುತ್ತದೆ. ಅದರಂತೆ ಗುತ್ತಿಗೆ ಮತ್ತು ಬಾಡಿಗೆಗಳಿಂದ ವಸೂಲಾಗುವ ಆದಾಯವನ್ನು ಆಯಾಯ ದೇವಾಲಯಗಳ ಹೆಸರಿನಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆ.</td></tr>
<tr><td>ಇ)</td><td>ಇಲಾಖೆಯ ಆಸ್ತಿಯನ್ನು ಖಾಸಗಿ ಯವರು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಇದರ ಒಟ್ಟು ಮೌಲ್ಯವೆಷ್ಟು; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)</td><td rowspan="2">ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಿಗೆ ಸೇರಿದ ಆಸ್ತಿಗಳ ಒತ್ತುವರಿಗಳನ್ನು ಗುರುತಿಸುವ ಸಲುವಾಗಿ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ರಾಜ್ಯದಾದ್ಯಂತ ಇರುವ ಅಧಿಸೂಚಿತ ದೇವಾಲಯದ ಸ್ವತ್ತುಗಳು ಆಯಾಯ ಜಿಲ್ಲೆಯಲ್ಲಿನ ಗ್ರಾಮಠಾಣಾ/ ಪಂಚಾಯಿತಿ/ ಪುರಸಭೆ/ ನಗರಸಭೆ/ಮಹಾನಗರಪಾಲಿಕೆ/ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವುದರಿಂದ ಮೌಲ್ಯ ನಿರ್ಧರಣೆಯನ್ನು ಸ್ಥಳೀಯ ಮಾರುಕಟ್ಟೆ ದರಕ್ಕನುಗುಣವಾಗಿ ಸಕ್ಷಮ ಪ್ರಾಧಿಕಾರಗಳು (ನೋಂದಣಿ ಮತ್ತು ಮುದ್ರಾಂಕ ಇಲಾಖೆ & ಲೋಕೋಪಯೋಗಿ ಇಲಾಖೆ) ರವರಿಂದ ನಿರ್ಧರಿಸಲ್ಪಡುವುದರಿಂದ, ಮತ್ತು</td></tr>
<tr><td>ಈ)</td><td>ಒತ್ತುವರಿಯಾಗಿರುವ ಜಮೀನುಗಳ ಪೈಕಿ ಇದುವರೆಗೂ ಎಷ್ಟು ಆಸ್ತಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ;</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಕಾಲಕಾಲಕ್ಕೆ ಸ್ವತ್ತುಗಳ ಮೌಲ್ಯಗಳಲ್ಲಿ ಬದಲಾವಣೆಯಾಗುವುದರಿಂದ ಸ್ವತ್ತುಗಳ ಮೌಲ್ಯಗಳ ನಿರ್ಧರಣೆಯು ಕಷ್ಟಸಾಧ್ಯವಾಗಿರುತ್ತದೆ.<br><br>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳು/ಸಂಸ್ಥೆಗಳ ಬಹುತೇಕ ಜಮೀನುಗಳು ಇನಾಂ ರದ್ದತಿ ಕಾಯ್ದೆ ಮತ್ತು ಭೂ ಸುಧಾರಣೆ ಕಾಯ್ದೆಗಳಡಿಯಲ್ಲಿ ಸರ್ಕಾರದಲ್ಲಿ ವಿಹಿತವಾಗಿರುತ್ತದೆ. ಇನ್ನೂ ಹೆಚ್ಚಿನ ಜಮೀನುಗಳು ಅನೇಕ ಕಾರಣಗಳಿಂದ ಹಲವಾರು ನ್ಯಾಯಾಲಯಗಳಲ್ಲಿ, ಭೂಸುಧಾರಣ ಟ್ರಿಬ್ಯೂನಲ್‌ಗಳಲ್ಲಿ, ಸಿವಿಲ್ ವ್ಯಾಜ್ಯಗಳಲ್ಲಿ, ಭೂಸ್ವಾಧೀನ ಪ್ರಕರಣಗಳಲ್ಲಿ, ಖಾಸಗಿ ತಕರಾರುಗಳಲ್ಲಿ ವಿಚಾರಣಾ ಹಂತದಲ್ಲಿರುತ್ತವೆ.<br><br>ಸರ್ಕಾರದಲ್ಲಿ ವಿಹಿತವಾಗಿರುವ ಜಮೀನುಗಳನ್ನು ಹೊರತುಪಡಿಸಿ, ದೇವಾಲಯಕ್ಕೆ ಸೇರಿದ ಉಳಿದೆಲ್ಲ ಜಮೀನುಗಳನ್ನು ಆಯಾಯ ದೇವಾಲಯಗಳ ಹೆಸರಿನಲ್ಲಿಯೇ ಖಾತೆ/ ಪಹಣಿ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>2023 ಮತ್ತು 2024ನೇ ಸಾಲಿನ ಅಂತ್ಯದ ವರೆಗೆ 11,498 ಎಕರೆ ಆಸ್ತಿಗಳನ್ನು ದೇವಾಲಯದ ಹೆಸರಿಗೆ ಪಹಣಿಯಲ್ಲಿ ಇಂಡೀಕರಿಸಲಾಗಿದ್ದು, ಒಟ್ಟಾರೆ ಸುಮಾರು **15,413 ಎಕರೆ** ಆಸ್ತಿಗಳನ್ನು ದೇವಾಲಯಗಳ ಹೆಸರಿಗೆ ಪಹಣಿಯಲ್ಲಿ ಇಂಡೀಕರಣ ಮಾಡಲಾಗಿರುತ್ತದೆ.<br><br>ಚೋಳನಾಯಕನಹಳ್ಳಿ ಗ್ರಾಮದ ಒಟ್ಟು 287-09 ಎಕರೆ-ಗುಂಟೆ ಜಮೀನಿನ ಪೈಕಿ **48.33** ಎಕರೆ-ಗುಂಟೆ ವಿಸ್ತೀರ್ಣದ ಜಮೀನಿನ ಒತ್ತುವರಿ ಯನ್ನು ತೆರವುಗೊಳಿಸಿ ಶ್ರೀ ರಂಗನಾಥ ಸ್ವಾಮಿ ದೇವಾಲಯದ ಹೆಸರಿಗೆ ಆರ್.ಟಿ.ಸಿಯನ್ನು ಇಂಡೀಕರಣ ಮಾಡಿ ಫೆನ್ಸಿಂಗ್ ಹಾಕಲಾಗಿದೆ.<br><br>ಬೆಂಗಳೂರು ನಗರ ಆಲಸೂರುಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79ರಲ್ಲಿ 15-12 ಎಕರೆ/ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ. ಈ ಪೈಕಿ ಖಾಲಿ ಜಾಗದಲ್ಲಿ ನಿರ್ಮಿಸಲಾದ ತಾತ್ಕಲಿಕ ಶೆಡ್‌ಗಳನ್ನು ತೆರವುಗೊಳಿಸಿ ಕಾಂಪೌಂಡ್ ನಿರ್ಮಿಸ ಲಾಗುತ್ತಿದೆ. ಹಾಗೂ ಉಳಿಕೆ ಪ್ರದೇಶದ ವಿಸ್ತೀರ್ಣ ದಲ್ಲಿರುವ ಒಟ್ಟು 204 ಜನ ಅನಧಿಕೃತ ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು ವಿಚಾರಣೆ ಹಂತದಲ್ಲಿ ಇರುತ್ತದೆ.<br><br>ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್.ಪುರಂ ಹೋಬಳಿ, ಚೇಳಿಕೆರೆ ಗ್ರಾಮದಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಾಲಯಕ್ಕೆ ಸೇರಿದ ಸರ್ವೆ ನಂಬರ್ 59ರ **1-05** ಎಕರೆ-ಗುಂಟೆ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಉ) | ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳಿಗೆ ರಾಜ ಮಹಾರಾಜರ ಕಾಲದಿಂದಲೂ ನಾನಾ ಸಂದರ್ಭಗಳಲ್ಲಿ ದಾನದ ರೂಪದಲ್ಲಿ ಹಾಗೂ ಇನಾಂ ರೂಪದಲ್ಲಿ ಬಂದಿರುವ ಆಸ್ತಿಗಳೆಷ್ಟು; ಇವುಗಳು ಕಂದಾಯ ಇಲಾಖೆಯ ದಾಖಲೆಗಳಲ್ಲಿ ನಮೂದಾಗಿದೆಯೇ? (ವಿವರಗಳನ್ನು ಒದಗಿಸುವುದು) | ಮೈಸೂರು (ಧಾರ್ಮಿಕ ಮತ್ತು ಧರ್ಮಾರ್ಥ) ಇನಾಂ ಜಮೀನುಗಳ ರದ್ದತಿ ಕಾಯ್ದೆ 1955 ಹಾಗೂ ಕರ್ನಾಟಕ ಭೂ ಸುಧಾರಣೆ ಕಾಯ್ದೆಯು 1961ರಲ್ಲಿ ಜಾರಿಯಾಗಿರುತ್ತದೆ.<br><br>ಸದರಿ ಕಾಯ್ದೆಗಳ ಅಡಿಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳ/ ಧಾರ್ಮಿಕ ಸಂಸ್ಥೆಗಳ ಬಹುತೇಕ ಜಮೀನುಗಳು ಇನಾಂ ರದ್ದತಿ ಕಾಯ್ದೆ ಮತ್ತು ಭೂ-ಸುಧಾರಣೆ ಕಾಯ್ದೆಗಳಡಿಯಲ್ಲಿ ಸರ್ಕಾರದಲ್ಲಿ ವಿಹಿತವಾಗಿದ್ದು, ಈ ಜಮೀನುಗಳನ್ನು ಭೂ ನ್ಯಾಯಮಂಡಳಿಗಳ ಮೂಲಕ ಅಧಿಭೋಗದಾರರಿಗೆ ಭೂ ಮಂಜೂರಾತಿ ಮಾಡಲಾಗಿರುತ್ತದೆ. ಈ ಭೂ ನ್ಯಾಯಮಂಡಳಿಗಳ ಅಧ್ಯಕ್ಷರು ಆಯಾಯ ಉಪವಿಭಾಗಗಳ ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಗಳು ಆಗಿದ್ದು, ಸಂಬಂಧಪಟ್ಟ ತಹಶೀಲ್ದಾರ್ ರವರು ಸದಸ್ಯ ಕಾರ್ಯದರ್ಶಿಗಳಾಗಿ ಕರ್ತವ್ಯ ನಿರ್ವಹಿಸಲು ಸಕ್ಷಮ ಪ್ರಾಧಿಕಾರಗಳಾಗಿರುತ್ತಾರೆ. |

ಕಂಇ 16 ಮುಸಪ್ರ 2025

(ರಾಮಲಿಂಗಾರೆಡ್ಡಿ)
**ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು**

ಅನುಬಂಧ-1

ಧಾರ್ಮಿಕ ಸಂಸ್ಥೆಗಳನ್ನು ಗುತ್ತಿಗೆ ನೀಡಿರುವ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ಗುತ್ತಿಗೆ ನೀಡಿರುವ ಅಂಗಡಿ ಮಳಿಗೆಗಳ ಸಂಖ್ಯೆ | ಕಟ್ಟಡ | ಅಥಿತಿ ಗೃಹ | ವಿದ್ಯಾ ಸಂಸ್ಥೆಗಳು |
|---|---|---|---|---|---|
| 1 | ತುಮಕೂರು | 52 | 9 | 2 | 1 |
| 2 | ದಕ್ಷಿಣ ಕನ್ನಡ | 84 | 81 | 2 | 0 |
| 3 | ವಿಜಯಪುರ | ಯಾವುದು ಇಲ್ಲ | 0 | 0 | 0 |
| 4 | ಉತ್ತರ ಕನ್ನಡ | 4 | ಮನೆ 9<br>ಕಟ್ಟಡ 2 | 0 | 0 |
| 5 | ಯಾದಗಿರಿ | 38 | 0 | 0 | 0 |
| 6 | ಚಿಕ್ಕಬಳ್ಳಾಪುರ | 42 | 0 | 0 | 0 |
| 7 | ಬಾಗಲಕೋಟೆ | 2 | 0 | 0 | 0 |
| 8 | ಮೈಸೂರು | 49 | 3 ಕಟ್ಟಡ<br>36 ಎಕರೆ<br>6ಗುಂಟೆ<br>ಜಮೀನು | 0 | 0 |
| 9 | ವಿಜಯನಗರ | 0 | 30 ಕಟ್ಟಡ<br>ಖಾಲಿ ಜಾಗ<br>11 | 5 | 0 |
| 10 | ಚಿತ್ರದುರ್ಗ | | 57 ಎಕರೆ<br>29 ಗುಂಟೆ<br>ಜಮೀನು | 0 | 0 |
| 11 | ದಾವಣಗೆರೆ | 14 | 0 | 0 | 0 |
| 12 | ಚಾಮರಾಜನಗರ | 26 | 4 ಎಕರೆ 10<br>ಗುಂಟೆ ಜಾಗ | 0 | 0 |
| 13 | ಹಾಸನ | 13 | | 0 | 0 |
| 14 | ಚಿಕ್ಕಮಗಳೂರು | 6 | | 0 | 0 |
| 15 | ಬೆಂಗಳೂರು ಗ್ರಾಮಾಂತರ | 42 | 0 | 0 | 0 |
| 16 | ಕಲಬುರ್ಗಿ | | | 0 | 0 |
| 17 | ಹಾವೇರಿ | ಯಾವುದು ಇಲ್ಲ | | 0 | 0 |
| 18 | ಗದಗ್ | 48 | | 0 | 0 |
| 19 | ಶಿವಮೊಗ್ಗ | 22 | 1 | 1 | 0 |
| 20 | ಬೆಳಗಾವಿ | 484 | | | 0 |
| 21 | ಕೋಲಾರ | 103 | | | 0 |
| 22 | ರಾಮನಗರ | 10 | 43 | | 0 |
| 23 | ಉಡುಪಿ | 59 | 14 | ಪಾರ್ಕಿಂಗ್<br>ಜಾಗ 1<br>ಗೆಸ್ಟ್ ಹೌಸ್ 2 | 0 |
| 24 | ಧಾರವಾಡ | ಯಾವುದು ಇಲ್ಲ | | 0 | 0 |
| 25 | ಬೆಂಗಳೂರು | 216 | 6 ಕಟ್ಟಡ | ಪಾರ್ಕಿಂಗ್<br>ಜಾಗ 1 | 4 |
| 26 | ಬಳ್ಳಾರಿ | | | 0 | 0 |
| 27 | ಮಂಡ್ಯ | 36 | 2 | 0 | 0 |
| 28 | ಬೀದರ್ | 188 | 7 | 0 | 0 |
| 29 | ಕೊಪ್ಪಳ | | | 0 | 0 |
| 30 | ರಾಯಚೂರು | | | 0 | 0 |
| 31 | ಕೊಡಗು | | | 0 | 0 |
| ಒಟ್ಟು | | 1538 | 207 ಕಟ್ಟಡ<br>98ಎಕರೆ 05 ಗುಂಟೆ<br>ಜಮೀನು<br>ಖಾಲಿ ಜಾಗ 11 | 12 ಅತಿಥಿಗೃಹ<br>ಪಾರ್ಕಿಂಗ್ ಜಾಗ 2 | 5 |
| | | | | ಆಯುಕ್ತರ ಪರವಾಗಿ<br>ಧಾರ್ಮಿಕ ದತ್ತಿ ಇಲಾಖೆ | |